Ex.P 32/2024
PW-01

<u>ದಿನಾಂಕಃ 04-02-2026.</u>

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟಿ ಸವಾಲುಃ ಡಿಕ್ರಿದಾರರ ಪರ ಶ್ರೀ RND ಮಾನ್ಯ ವಕೀಲರಿಂದಃ</u>**

ದಾವಾ ಸ್ವತ್ತಿನ ಸರ್ವೆ ನಂಬರ 53 ಕ್ಷೇತ್ರ 06 ಎಕರೆ 08 ಗುಂಟೆ ಇರುತ್ತದೆ. ನನಗೆ ದಾವಾ ಸ್ವತ್ತಿನ ಚೆಕ್ ಬಂದಿ ಹೇಳಲು ಬರುವುದಿಲ್ಲ. ದಾವಾ ಸ್ವತ್ತು ಕರಿ ಭೂಮಿಯಾಗಿರುತ್ತದೆ. ನನ್ನ ತಂದೆ ತೀರಿಕೊಂಡ ನಂತರ ದಾವಾ ಸ್ವತ್ತು ನನ್ನ ತಾಯಿಯ ಹೆಸರಿಗೆ ಆಗಿರುತ್ತದೆ ಆದರೆ ಅವರು ಅದನ್ನು ನಮಗೆ ಗೊತ್ತಿರದ ಹಾಗೆ ಮಾಡಿಕೊಂಡಿರುತ್ತಾರೆ. ಸದರಿ ವಿಚಾರ ನನಗೆ ಈಗ್ಗೆ 1 ವರ್ಷದ ಹಿಂದೆ ತಿಳಿದಿರುತ್ತದೆ. ಸದರಿ ವರ್ಗಾವಣೆ ಬಗ್ಗೆ ನಾನು ಯಾವುದೇ ಕಂದಾಯ ಕಚೇರಿಯಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ಪಹಣಿಗಳಲ್ಲಿ ನಮ್ಮ ಹೆಸರನ್ನು ಸೇರಿಸುವಂತೆ ತಲಾಟಿಯವರಿಗೆ ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ತಾಯಿಯು ನಮ್ಮಗಳ ವಿದ್ಯಾಬ್ಯಾಸಕ್ಕಾಗಿ ಹಾಗೂ ನಮ್ಮ ತಂದೆಯವರು ಮಾಡಿರುವ ಸಾಲವನ್ನು ತೀರಿಸಲು ದಾವಾ ಸ್ವತ್ತನ್ನು ಸದರಿ ಲಿಂಗಾರೆಡ್ಡಿ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಸದರಿ ಲಿಂಗಾರೆಡ್ಡಿ ಇವರಿಗೆ ಸದರಿ ಸ್ವತ್ತನ್ನು ರೂ.21,00,000/- ಗಳಿಗೆ ಮಾರಾಟ ಮಾಡಲು ಒಪ್ಪಿಕೊಂಡು ಅವರಿಂದ ಮುಗಂಡವಾಗಿ ರೂ.10,00,000- ಗಳನ್ನು ಪಡದುಕೊಂಡು ಖರೀದಿ ಕರಾರು ಪತ್ರವನ್ನು ದಿಃ 24-06-2021 ರಂದು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಲಿಂಗಾರೆಡ್ಡಿ ಇವರು ನನ್ನ ತಾಯಿಗೆ ಉಳಿದ ಹಣವನ್ನು ಪಡೆದುಕೊಂಡು ಖರೀದಿ ಪತ್ರವನ್ನು ಬರೆದುಕೊಡಲು ಕೇಳಿದ್ದರೂ ಕೂಡಾ ನನ್ನ ತಾಯಿಯು ಬರೆದು ಕೊಡದ

ಕಾರಣ ಸದರಿಯವರು ಇದೇ ನ್ಯಾಯಾಲಯದಲ್ಲಿ OS No.41/2023 ನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ತಾಯಿಯು ಮಾನ್ಯ ವಕೀಲರನ್ನು ನೇಮಕ ಮಾಡಿಕೊಂಡಿದ್ದರು ಹಾಗೂ ಸದರಿ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಲಿಂಗಾರೆಡ್ಡಿ ಪ್ರಸ್ತುತ ಅಮಲ್ಜಾರಿ ಅರ್ಜಿಯನ್ನು ಸಲ್ಲಿಸಿ ಈ ನ್ಯಾಯಾಲಯದಲ್ಲಿ ಉಳಿದ ರೂ.10,00,000/- ಗಳನ್ನು deposit ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ 41/2023 ರಲ್ಲಿ ಡಿಕ್ರಿಯಾಗಿರುತ್ತದೆ ಎಂದು ಊರಿನಲ್ಲಿ ಈಗ್ಗೆ 1 ವರ್ಷದ ಹಿಂದೆ ಸುದ್ದಿಯಾಗಿದ್ದರಿಂದ ನನಗೆ ಅದರ ಬಗ್ಗೆ ತಿಳಿದು ಬಂದಿರುತ್ತದೆ. ಸದರಿ ಡಿಕ್ರಿಯ ಬಗ್ಗೆ ತಿಳಿದು ಬಂದ ನಂತರ ನಾನಾಗಲೀ ಹಾಗೂ ನನ್ನ ತಾಯಿ ಸರೋಜಮ್ಮ ಇವರಾಗಲೀ ಸದರಿ ಡಿಕ್ರಿಯ ವಿರುದ್ದ ಎಲ್ಲಿಯೂ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ನನ್ನ ತಾಯಿಯೇ ಸದರಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ ಕಾರಣ ನಾವುಗಳು ಸದರಿ ಡಿಕ್ರಿಯ ವಿರುದ್ದ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ನನ್ನ ತಾಯಿಗೆ ಈ ನ್ಯಾಯಾಲಯದಿಂದ ಸಮನ್ಸ ತಲುಪಿದ್ದರೂ ಕೂಡಾ ಅವರು ಪ್ರಸ್ತುತ ಪ್ರಕರಣದಲ್ಲಿ ಹಾಜರಾಗಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿಯು ತಮ್ಮ ಪ್ರಾಪಂಚಿಕ ಅಡಚಣೆಗಾಗಿ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯನ್ನು ಸಲ್ಲಿಸಿದರೆ ಬಹಳಷ್ಟು ಹಣ ಖರ್ಚಾಗುತ್ತದೆ ಎಂದು ಹೇಳಿ ನನ್ನಿಂದ ಪ್ರಸ್ತುತ ಪ್ರಕರಣದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಲಿಂಗಾರೆಡ್ಡಿ ಇವರು ಸದರಿ ದಾವೆಯನ್ನು ಮಾಡಿರುವ ವಿಚಾರ ನನಗೂ ಹಾಗೂ ನನ್ನ ತಾಯಿಗೆ ತಿಳಿದಿದ್ದರೂ ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ತಾಯಿ ಒಟ್ಟಿಗೆ ವಾಸ ಮಾಡುತ್ತೇವೆ ಎಂದರೆ ಸರಿಯಲ್ಲ. ಸದರಿ ಲಿಂಗಾರೆಡ್ಡಿ ಇವರಿಗೆ ತೊಂದರೆ

ಕೊಡಲು ನಾನು ಹಾಗೂ ನನ್ನ ತಾಯಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು,

ಮತ್ತು. ಪ್ರ.ದ.ನ್ಯಾ.ದಂ.

ಶಹಾಪೂರ.